


ಕಾರ್ನಾಡರ ನಿರ್ದೇಶನದ 'ಕಾಡು' ಚಿತ್ರದಲ್ಲಿ ಅಮರೀಶ್ ಪುರಿ ಹಾಗೂ ನಾಸಿರುದ್ದೀನ್ ಶಾ

ಅವರ ಕಣ್ಣುಗಳನ್ನು ಕಂಡಾಗ ಈತ ದೇವಮಾನವನೇ ಇರಬೇಕು ಎಂದು ನನಗೆ ಅನ್ನಿಸಿತ್ತು. ಬಹುಶಃ ಮನಸ್ಸು ಮಾಡಿದ್ದರೆ ರಜನೀಶರನ್ನೂ ಹಿಂದಿಕ್ಕಬಲ್ಲರಾಗಿದ್ದರೆನಿಸುತ್ತದೆ. ಆದರೆ ಅವರು ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯಾಕಾಂಕ್ಷಿಗಳ ಜತೆ ಜಗಳವಾಡುವ ಹಾದಿಯನ್ನು ಆರಿಸಿಕೊಂಡರು.

'ಎಫ್‌ಟಿಐಐ' ನಿರ್ದೇಶಕರಾಗಿ ಬಂದಾಗ ಅವರು ಹಿಂದೊಮ್ಮೆ ಅಲ್ಲಿನ ವಿದ್ಯಾರ್ಥಿ ಆಗಬಯಸಿದ್ದನ್ನು ಹಂಚಿಕೊಂಡಾಗ ನಾನು ಕಣ್ಣರಳಿಸಿದ್ದೆ. ಎರಡು ವರ್ಷ ಅಲ್ಲಿ ಅವರೊಟ್ಟಿಗೆ ನನ್ನ ಒಡನಾಟ ಅಷ್ಟಕ್ಕಷ್ಟೆ. ಅವರು ನಟನಾ ವಿಭಾಗದ ಉಸಾಬರಿಗೆ ಬರುತ್ತಿದ್ದುದೇ ಅಪರೂಪ. ಎರಡು ವರ್ಷಗಳ ನಂತರ ನಮ್ಮ ಕೋರ್ಸ್ ಮುಗಿಯುತ್ತಾ ಬಂದಾಗ ಒಂದು ಪ್ರತಿಭಟನೆ ನಡೆಸಿದವು. ಅದು ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ ನಡೆದಿತ್ತು. ಆದರೆ, ಗಿರೀಶ ಕಾರ್ನಾಡರು ಅದನ್ನು ಅತಿ ಕ್ಷುಲ್ಲಕ ಕಾರಣದ ನಡೆ ಎಂದು ಟೀಕಿಸಿದ್ದರು. ಅದೊಂದು ಬಗೆಹರಿಸಲಾಗದ ಬಿಕ್ಕಟ್ಟೇ ಹೌದಾಗಿತ್ತು.

ಗಿರೀಶರಂತಹವರು ಮೃತಪಟ್ಟಾಗ ಅವರನ್ನು ಬಲ್ಲ ಯಾರು ಏನು ಪ್ರತಿಕ್ರಿಯಿಸುತ್ತಾರೆ ಎಂಬ ಕುತೂಹಲ ಮಾಧ್ಯಮದವರಿಗೆ ಇರುತ್ತದೆ. ಅವರು ತಮಗೆ ಮೆಚ್ಚಾಗುವ ನುಡಿಯನ್ನೇ ಮಾತನಾಡುವವರ ಬಾಯಿಗೂ ಹಾಕುವ ಸಾಧ್ಯತೆ ಇದೆ. ಗಿರೀಶ ಕಾರ್ನಾಡರನ್ನು ಬಲ್ಲ ನಾನು ಆ ರೀತಿಯ ವಿಷಯ ಖಚಿತತೆಯಿಂದಾಗಿಯೇ ಅವರ ಸಾವಿನ ವಿಷಯದಲ್ಲಿ ಮಾಧ್ಯಮ ವಿಮುಖನಾದೆ. ಬದುಕಿದ್ದಾಗ ಅವರನ್ನು ನಾನು ಕಂಡ–ವಿಮರ್ಶಿಸಿದ ಬಗೆ, ಅವರಿಲ್ಲದ ಈ ಹೊತ್ತಿನಲ್ಲಿ ಅವರ ನೆನಕೆ ಎರಡನ್ನೂ ನನಗಷ್ಟೇ ಅಲ್ಲ, ಯಾರಿಗೇ ಆದರೂ ಮುಂದಿಡುವುದು ಕಷ್ಟವಾಗಬಹುದು. ಅದಕ್ಕೆ ಹೆಚ್ಚು ಕಾಲಾವಕಾಶ ಬೇಕಾದೀತು. ಭಾವನಾತ್ಮಕ ಕ್ಲೀಷೆಗಳನ್ನು ನಾನು ಹೇಳಲಾರೆ.

ನಾಟಕಕಾರ ಟಾಮ್ ಸ್ಟಾಪರ್ಡ್ ಒಂದು ನಾಟಕದಲ್ಲಿ ಅದ್ಭುತವಾಗಿ ಹೇಳಿದ್ದಾರೆ: 'ಸಾವನ್ನು ನಟನೊಬ್ಬ ಅಭಿನಯಿಸಲು ಸಾಧ್ಯವಿಲ್ಲ. ಸಾವು ಶೋಕಾಚರಣೆ ಅಭಿನಯದ ವಿಷಯವಲ್ಲ. ಅದು ವ್ಯಕ್ತಿಯೊಬ್ಬನ ಗೈರುಹಾಜರಿ. ವ್ಯಕ್ತಿಯೊಬ್ಬ ತಿರುಗಿನೋಡಲಾಗದ, ಎದ್ದುಬಾರಲಾಗದ ಸ್ಥಿತಿ.' ಗಿರೀಶರನ್ನು ಬಲ್ಲ ಯಾರಿಗೇ ಆದರೂ ಅವರ ಸಾವಿನಿಂದ ಹೊರಬರಲು ಹೆಚ್ಚೇ ಕಾಲ ಬೇಕಾಗಬಹುದು. ನಾನು ಅವರನ್ನು ಅಪರೂಪಕ್ಕೆ ನೋಡಿದವನು. ಅವರನ್ನು ಮಿಸ್